ಅ) ಪ್ರತಿ ತಾಲ್ಲೂಕು ಪಂಚಾಯಿತಿಗೂ ಹೊಸದಾಗಿ ಒಂದು ಜೀಪನ್ನು ಒದಗಿಸಲು ಸರ್ಕಾರವು ನಿರ್ಧರಿಸಿದೆ. 1995-96ನೇ ಸಾಲಿನಲ್ಲಿ ಒಟ್ಟು 88 ಜೀಪುಗಳನ್ನು 88 ತಾಲ್ಲೂಕು ಪಂಚಾಯತ್‌ಗಳಿಗೆ ಖರೀದಿಸಲು ಅನುಮತಿ ನೀಡಿದೆ. ಹಾಗೂ ಅವಶ್ಯವಿರುವ ಅನುದಾನವನ್ನು ಎಲ್ಲಾ ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿದೆ.

ಆ) ಹೌದು. 1996-97ನೇ ಸಾಲಿನಲ್ಲಿ ಉಳಿದ 87 ತಾಲ್ಲೂಕು ಪಂಚಾಯತ್‌ಗಳಿಗೆ ಜೀಪುಗಳನ್ನು ಖರೀದಿಸಲು ಸದ್ಯದಲ್ಲಿ ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು : ಮಂಡಿಸಲಾಯಿತು.

3. ವರದಿಯನ್ನೊಪ್ಪಿಸುವುದು

ಡಾ: ಎಂ.ಪಿ.ಕರ್ಕಿ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ):- ಮಾನ್ಯ ಅಧ್ಯಕ್ಷರೆ ಗೃಹ ಮತ್ತು ಒಳಾಡಳಿತ, ಲೋಕೋಪಯೋಗಿ, ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ, ಶಿಕ್ಷಣ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗಳಿಗೆ ಸಂಬಂಧಿಸಿದ ಸಮಿತಿಯ 11, 12, 13, 14, 15 ಮತ್ತು 16ನೇ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

4. ಅರ್ಜಿಗಳನ್ನೊಪ್ಪಿಸುವುದು

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಅಧ್ಯಕ್ಷರೆ, ರಾಜ್ಯ ಸಾರಿಗೆ ಸಂಸ್ಥೆಯ ಬಸ್ಸುಗಳ ಸಂಚಾರದ ಅವ್ಯವಸ್ಥೆ ಬಗ್ಗೆ ಹಿರೇಕೆರೂರು ತಾಲ್ಲೂಕಿನ ನಾಗರಿಕರು ನೀಡಿರುವ ಅರ್ಜಿ ಮತ್ತು ಅದೇ ತಾಲ್ಲೂಕಿನ ಕೋಡ ಗ್ರಾಮದಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸುವ ಬಗ್ಗೆ ಅಲ್ಲಿನ ಗ್ರಾಮಸ್ಥರು ನೀಡಿರುವ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಅಧ್ಯಕ್ಷರೆ, ಉಳುಮೆ ಮಾಡುತ್ತಿರುವ ಬಗರ್‌ಹುಕುಂ ಜಮೀನುಗಳನ್ನು ಖಾಯಂಗೊಳಿಸಿ ಹಕ್ಕುಪತ್ರ ನೀಡಬೇಕೆಂದು ಶಿರಾ ತಾಲ್ಲೂಕಿನ ಬುಕ್ಕಾಪಟ್ಟಣ ಹೋಬಳಿ ರಂಗನಾಥಪುರ ಗ್ರಾಮದ ಗ್ರಾಮಸ್ಥರು ನೀಡಿರುವ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು:- ಅರ್ಜಿಗಳನ್ನೊಪ್ಪಿಸಲಾಯಿತು.

5. ಹಕ್ಕು ಚ್ಯುತಿ ಮಂಡನೆ

ವಿಷಯ:- ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ (ಸಿಡಬ್ಲ್ಯೂಸಿ) ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರಾದ ನಂದನಾರೆಡ್ಡಿಯವರ ಮೇಲೆ ಹಕ್ಕುಚ್ಯುತಿ ಮಂಡನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ):- ಮಾನ್ಯ ಅಧ್ಯಕ್ಷರೆ, ತಮಗೆ

ಗೊತ್ತಿರುವಂತೆ ವಿಧಾನಮಂಡಲದಲ್ಲಿ ಸಮಿತಿಗಳನ್ನು ರಚಿಸಿ ಸಮಿತಿಗಳಿಗೆ ಅಧ್ಯಕ್ಷರುಗಳನ್ನು ನೇಮಿಸಲಾಗುತ್ತದೆ. ಸಮಿತಿಯಲ್ಲಿ ಈ ಕೆಳಮನೆ ಮತ್ತು ಮೇಲ್ಮನೆಯ ಸದಸ್ಯರುಗಳಿದ್ದು ಅವರು ಸಮಿತಿಯಲ್ಲಿದ್ದುಕೊಂಡು ವಿವಿಧ ಇಲಾಖೆಗಳ ಕಾರ್ಯಚಟುವಟಿಕೆಗಳ ಬಗ್ಗೆ ಅಧ್ಯಯನ ಮಾಡಿ ವರದಿ ಕೊಡುತ್ತಾರೆ. ವರದಿ ಕೊಟ್ಟ ನಂತರ ಸಮಿತಿಯನ್ನು ಅವಹೇಳನ ಮಾಡುವ ರೀತಿಯಲ್ಲಿ ಪಬ್ಲಿಕೇಶನ್ ಕೊಡತಕ್ಕಂಥಾದ್ದು, ರಿಪ್ಲೈ ಕೊಡತಕ್ಕಂಥಾದ್ದು ಮತ್ತು ತಮ್ಮ ಸ್ಥಾನಕ್ಕೂ ಅವಹೇಳನ ಮಾಡಿರುವುದರ ಬಗ್ಗೆ ಮೂರು ಹಕ್ಕುಚ್ಯುತಿ ಸೂಚನೆಗಳನ್ನು ನಾನು ತಮ್ಮ ಮುಂದೆ, ತಮ್ಮ ಅನುಮತಿ ಬೇಡಿ ಮಂಡಿಸುತ್ತಿದ್ದೇನೆ.

MR.SPEAKER:- I have gone through the request that you have made. Prima facie I am convinced that there is some substance in what you have said. I have referred it to the Privileges Committee. ಇದರ ಬಗ್ಗೆ ಪ್ರಾಸ್ತವಿಕವಾಗಿ ಹೇಳಿ. You just make a mention.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಅಧ್ಯಕ್ಷರೆ, ತಾವು ನೇಮಿಸಿದ್ದ ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಸಮಿತಿಯು ಹಿಂದೆ 'ಕನ್ಸ್ರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ (ಸಿಡಬ್ಲ್ಯೂಸಿ)' ಸಂಸ್ಥೆ ಬಗ್ಗೆ ಅಧ್ಯಯನ ಮಾಡಿ, ಆ ಕುರಿತ ವರದಿಯನ್ನು ತಮಗೆ ಸಲ್ಲಿಸಿದ ಬಳಿಕ, ವರದಿ ಬಗ್ಗೆ ಪತ್ರಿಕೆಯವರಿಗೆ ಮಾಹಿತಿ ನೀಡುವುದಕ್ಕಾಗಿ ತಮ್ಮ ಅನುಮತಿ ಬೇಡಿದಾಗ ತಾವು ದಿನಾಂಕ 23.4.96ರಂದು ಅನುಮತಿ ಇತ್ತ ನಂತರ ತಮ್ಮ ಅನುಮತಿ ಮೇರೆಗೆ ಪಬ್ಲಿಕೇಷನ್‌ಗಾಗಿ ದಿನಾಂಕ 24.4.96ರಂದು ವರದಿಯನ್ನು ಪತ್ರಿಕೆಯವರಿಗೆ ಬಿಡುಗಡೆ ಮಾಡಿದೆ. ನಂತರ ಇದಕ್ಕುತ್ತರವಾಗಿ ಏನು ಹೇಳಿದ್ದಾರೆಂದರೆ ನಾನು ಜಾಸ್ತಿ ಓದಲು ಹೋಗುವುದಿಲ್ಲ. ಏನೆಂದರೆ, "they barged in and occupied the space..... while some of them began to enter into the permises, corned children, inspected the Kitchen.... they were thrashed...."

Secondly, this is a gross misuse of powers of privileges offered to members of the House and the committees of the Legislature. They have misused the rights and abandoned their responsibilities as elected representatives of the people. ಎಕ್ಸಿಕ್ಯೂಟಿವ್ ಡೈರೆಕ್ಟರ್ ಆದ ಶ್ರೀಮತಿ ನಂದನಾರೆಡ್ಡಿಯವರು ಈ ರೀತಿಯ ಉತ್ತರ ಕೊಟ್ಟಿದ್ದಾರೆ. ಅವರು ಮುಂದುವರಿದು ಹೇಳುತ್ತಾರೆ: 'ಈ ವರದಿಯ ಭಾಷೆ ಮತ್ತು ಧ್ವನಿ ಕೆಟ್ಟ ಉದ್ದೇಶಗಳಿಂದ ಕೂಡಿದ್ದು, ಕರ್ನಾಟಕ ವಿಧಾನಸಭೆಯ ವಿಧಿ, ವಿಧಾನ ಹಾಗೂ ನೀತಿ ಸಂಹಿತೆಗಳನ್ನೆಲ್ಲಾ ಗಾಳಿಗೆ

ತೂರಿರುವ ಸಮಿತಿಯ ಆ ವರದಿ ನೈಸರ್ಗಿಕ ನ್ಯಾಯದ ವಿಧಿಗಳನ್ನು ಉಲ್ಲಂಘಿಸಿದೆ, ಸಮಿತಿಯು ಅಡ್ಡದಾರಿ ಹಿಡಿಯುವುದನ್ನು ಎತ್ತಿ ತೋರಿಸುತ್ತೇನೆ. ಜೊತೆಗೆ ಸುಳ್ಳು ಹೇಳಿಕೆಗಳನ್ನು ಪಡೆದುಕೊಂಡ ವಿಧಾನಗಳನ್ನು ಒದಗಿಸುತ್ತೇನೆ. ಲೈಂಗಿಕ ಹಿಂಸೆ ಈ ಸಂಸ್ಥೆಯಲ್ಲಿ ನಡೆಯುತ್ತಿದೆ ಎನ್ನುವ ಅತಿ ಬೇಜವಾಬ್ದಾರಿಯ ಹೇಳಿಕೆಗೆ ಯಾವ ಸಾಕ್ಷ್ಯಾಧಾರಗಳೂ ಇಲ್ಲ. ಅಥವಾ ಯಾರು ಯಾರಿಗೆ ಹಿಂಸಿಸುತ್ತಿದ್ದಾರೆಂದು ಎಂದಾಗಲೀ ವಿವರಣೆಗಳು ಇಲ್ಲವೆಂದು ಹೇಳುತ್ತಾ ಕೊನೆಯದಾಗಿ ಬಹಳ ಗಂಭೀರವಾಗಿ ಈ ಸಮಿತಿ ಬಗ್ಗೆ ಆರೋಪಿಸಿರುವುದೇನೆಂದರೆ, 'ಯಾವುದೇ ಗಾಂಭೀರ್ಯಬದ್ಧತೆ, ಮರ್ಯಾದೆ, ಜ್ಞಾನವಿಲ್ಲದೆ ರವಾನಿಸಲಾಗಿರುವ ವರದಿಯನ್ನು ತಿರಸ್ಕರಿಸಬೇಕೆಂದು ಸಭಾಪತಿಯವರಲ್ಲಿ ನಮ್ಮ ಬಿನ್ನಹ. ವಿಧಾನಮಂಡಲದಲ್ಲಿ ವರದಿಯನ್ನು ಮಂಡಿಸುವ ಮೊದಲೇ ಪತ್ರಿಕೆಗಳಿಗೆ ಬಿಡುಗಡೆ ಮಾಡಿ ಸಭೆಯ ಮರ್ಯಾದೆ, ಗೌರವಗಳನ್ನು ಕಳೆದು ಹಕ್ಕುಚ್ಯುತಿವೆಸಗಿರುವ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರನ್ನು ತರಾಟೆಗೆ ತೆಗೆದುಕೊಳ್ಳಬೇಕೆಂದು ನಮ್ಮ ಬಿನ್ನಹ. ಇದೇ ರೀತಿ ಇಪ್ಪತ್ತನಾಲ್ಕು ಪುಟಗಳ ಉತ್ತರವಿದೆ. ಇದರ ಬಗ್ಗೆ ಹೇಳಬೇಕೆಂದರೆ ಒಂದು ಗಂಟೆಯ ಮೇಲಾಗುತ್ತದೆ. ಇದರ ಒಂದು. ಮತ್ತೊಂದು ಕನ್ನಡ ಗಂಗೋತ್ರಿ ಎನ್ನತಕ್ಕ ವಾರಪತ್ರಿಕೆಯಲ್ಲಿ ದಿನಾಂಕ 11-7-1996ರಲ್ಲಿ ಬಿ.ಜೆ.ಪಿ.ಗೆ ಬಲಿಬಿದ್ದ ಮಾಧ್ಯಮ ಎನ್ನತಕ್ಕ ಶೀರ್ಷಿಕೆಯ ಅಡಿಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳ ಮೇಲೆ ಹಕ್ಕುಬಾಧ್ಯತೆಗೆ ಲೋಪವನ್ನು ತಂದಿರುವಂಥ ನಾಲ್ಕು ಪುಟಗಳನ್ನು ಪತ್ರಿಕೆಯಲ್ಲಿ ಪ್ರಕಟ ಮಾಡಿದ್ದಾರೆ. ಅದನ್ನು ಓದಿದ್ದೇ ಆದರೆ ಯಾವುದೇ ಸಮಿತಿಯಲ್ಲಿ ಯಾವ ಸದಸ್ಯರೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಪತ್ರಿಕೆಯಲ್ಲಿರುವ ಒಂದೇ ಒಂದು ವಾಕ್ಯವನ್ನು ಓದುತ್ತೇನೆ. ಇದೇ ವರದಿಯನ್ನು ಕೂಲಂಕಷವಾಗಿ ಪರಿಶೀಲಿದಾಗ ಕಂಡುಬರುವ ಅಂಶವೇನೆಂದರೆ ಸಮಿತಿಯು ವಿಶೇಷವಾಗಿ ಪ್ರಮೀಳಾ ನೇಸರ್ಗಿ ಸಿ.ಡಬ್ಲ್ಯೂ.ಸಿ. ಸಂಸ್ಥೆಯ ಬಗ್ಗೆ ಮೊದಲೆ ಪೂರ್ವಾಗ್ರಹ ಪೀಡಿತ ತೀರ್ಮಾನಕ್ಕೆ ಬಂದು ಅದಕ್ಕೆ ಪೂರಕವಾಗಿ ಅನುಕೂಲಕರವಾದ ಮಾಹಿತಿಯನ್ನು ಕಲೆಹಾಕಿದೆ. ಹೀಗೆ ಕಲೆ ಹಾಕಿರುವ ಮಾಹಿತಿಯಲ್ಲಿ ಯಾವ ದಾಖಲಿಗಳೂ ಪೂರ್ಣವಾಗಿಲ್ಲ. ಸ್ವತಃ ತೀರ್ಮಾನಕ್ಕೆ ಬರಲಾಗಿರುವ ನೇಸರ್ಗಿ ತಂಡ ಇದರ ಬಗ್ಗೆ ಸರ್ಕಾರ ವಿಚಾರಣೆ ಮಾಡಲಿ, ಸಿ.ಓ.ಡಿ. ತನಿಖೆಯಾಗಲೆಂದು ಮನವಿ ಮಾಡಿದೆ. ಬೆಟ್ಟ ಅಗೆದು ಇಲಿಯನ್ನಿಡಿದಂತೆ ವಿಚಾರಣೆಯಾಗಲಿಯೆಂದು ಅಪ್ಪಣೆ ಕೊಡಿಸುವ ನೇಸರ್ಗಿ ತಂಡಕ್ಕೆ, ಸರ್ಕಾರ ಹಣವನ್ನು ಅಪವ್ಯಯ ಮಾಡುವ ಅಗತ್ಯವಿರಲಿಲ್ಲ. ಇದು ಎರಡನೆಯದ್ದು. ಮೂರನೆಯದಾಗಿ ಬಹಳ ಮುಖ್ಯವಾದುದು. ತಮ್ಮ ಮೇಲೆ ತಮ್ಮ ಅಧಿಕಾರವನ್ನು ಉಪಯೋಗಿಸಿ ಸಮತಿಯನ್ನೇನು ಮಾಡಿದ್ದೀರಿ ಅದರೆ ಬಗ್ಗೆಯೂ NGO'S demand tabling of child welfare report in the House ಎಂದು ಹೇಳಿ ತಮ್ಮ ಬಗ್ಗೆ ರೆಫರ್ ಮಾಡುತ್ತ ಏನು ಹೇಳುತ್ತಾರೆಂದರೆ he cannot therefore take upon himself the power to forward a report without the

consent of the House. This is clearly a violation of procedure and is illegal, She said. ಅಂದರೆ ಈ ಸ್ಥಾನದಲ್ಲಿ ಕುಳಿತಿರುವ ತಮಗೆ ಮತ್ತು ಸಮಿತಿಯಲ್ಲಿ ಕೆಲಸಮಾಡತಕ್ಕ ಎಲ್ಲಾ ಸದಸ್ಯರಿಗೆ, ಈ ಸಭೆಯ ಮೇಲೆ ಅವಮಾನಕರವಾದಂಥ ಹೇಳಿಕೆಯನ್ನು ಪತ್ರಿಕೆಗಳ ಮೂಲಕ ಮತ್ತು ಬೇರೆ ಮೂಲಗಳ ಮೂಲಕ ಕೊಟ್ಟಿದ್ದಾರೆ. ಮತ್ತು ನಾವು ವರದಿಯನ್ನು ಕೊಡುವುದಕ್ಕೂ ಮೊದಲು ಮುಖ್ಯಕಾರ್ಯದರ್ಶಿಯವರಿಗೆ ಪ್ರಶ್ನೆಯನ್ನು ಹಾಕಿ ಪ್ರಶ್ನಿಸಿದ್ದಾರೆ. ಆದ್ದರಿಂದ ಇದು ಬಹಳ ಮುಖ್ಯವಾದ ಪ್ರಶ್ನೆ. ಬಹಳ ಕಾಲದ ನಂತರ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳತಕ್ಕದ್ದು.

ಶ್ರೀ ವಾಟಾಳ್‌ನಾಗರಾಜ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಮೀಳಾ ನೇಸರ್ಗಿಯವರು ಏನು ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಿದ್ದಾರೆ, ಅದನ್ನು ತಾವು ಹಕ್ಕುಚ್ಯುತಿ ಸಮಿತಿಗೆ ಕಳಿಸಿದ್ದೀರಿ. ಇದು ಮೇಲುನೋಟಕ್ಕೆ ಹಕ್ಕುಚ್ಯುತಿಯಾಗಿರುವುದರಲ್ಲಿ ಅನುಮಾನವೇ ಇಲ್ಲ. ಆದ್ದರಿಂದ ಸಂಬಂಧಪಟ್ಟವರಿಗೆ ಸಭೆಯಲ್ಲಿ ನೇರವಾಗಿ ಹಕ್ಕುಚ್ಯುತಿ ಮಾಡಿರುವುದಕ್ಕೆ ಶಿಕ್ಷೆ ನೀಡಲು ಅವಕಾಶವಿದೆ. ಅದು ದೊಡ್ಡ ಅಪರಾಧ. ಸದನಕ್ಕೂ ಅಗೌರವ, ಸದನದಲ್ಲಿ ಅಧ್ಯಕರಾಗಿರುವ ತಮ್ಮನ್ನೇ ಪ್ರಶ್ನೇ ಮಾಡಿ, ಈ ಸದನದ ವಿಚಾರವನ್ನೇ ಮರೆತು ಅವಿವೇಕದ ಪರಮಾವಧಿಯಲ್ಲಿ ಈ ರೀತಿ ಪತ್ರಿಕೆಗಳಲ್ಲಿ ಪ್ರಕಟಣೆ ಕೊಟ್ಟಿರುವುದು ಒಳ್ಳೆಯ ನೀತಿಯಲ್ಲ. ಯಾವುದೇ ಸಮಿತಿಯು ವರದಿಯನ್ನು ಕೊಟ್ಟಮೇಲೆ ಅದರ ಬಗ್ಗೆ ಅವರದ್ದೇ ಆದಂಥ ಹೇಳಿಕೆಯನ್ನು ಮಾಡಿ, ಪತ್ರಿಕೆಗಳಿಗೆ ಬಿಡುಗಡೆ ಮಾಡಿ, ಈ ಸಮಿತಿಯ ವರದಿಯ ಬಗ್ಗೆ ವಿಕೃತವಾದ ರೀತಿಯಲ್ಲಿ ಮಾತನಾಡಿ, ಸಮಿತಿಯ ಅಧ್ಯಕ್ಷರ ಮೇಲೆ ಸದನದ ಅಧ್ಯಕ್ಷರ ಬಗ್ಗೆ ಮಾತನಾಡತಕ್ಕದ್ದು ಸರಿಯಲ್ಲ. ಅದು ಪತ್ರಿಕೆಗಳಲ್ಲಿ ಬಂದಿರುವುದರಿಂದ ಈ ವಿಚಾರ ಹಕ್ಕುಚ್ಯುತಿ ಸಮಿತಿಯಲ್ಲಿ ತಿಂಗಳಗಟ್ಟಲೆ ಚರ್ಚೆಯಾಗಿ, ಸಂಬಂಧಪಟ್ಟವರನ್ನು ಕರೆದು, ಅವರ ಹೇಳಿಕೆ ತೆಗೆದುಕೊಂಡು ಅನಂತರ ನಿರ್ಧಾರಕ್ಕೆ ಬರಬೇಕೆಂದೇನಿಲ್ಲ. ಮೇಲುನೋಟಕ್ಕೆ ಸ್ಪಷ್ಟವಾಗಿ ಹಕ್ಕುಚ್ಯುತಿಯಾಗಿದೆ. ಆದ್ದರಿಂದ ತಾವು ನೇರವಾಗಿ ಅವರನ್ನು ಇಲ್ಲಿಗೆ ಕರೆದು ಚೀಮಾರಿಯಾಕಬೇಕು. ಆ ಕೆಲಸ ಮಾಡಲು ಈ ಸದನಕ್ಕೆ ಸಂಪೂರ್ಣವಾದ ಸ್ವಾತಂತ್ರವಿದೆ. ಅದರ ಬಗ್ಗೆ ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಸಿ.ಡಬ್ಲ್ಯೂ.ಸಿ ನಿರ್ದೇಶಕರಾಗಿ ಜವಾಬ್ದಾರಿ ಸ್ಥಾನದಲ್ಲಿದ್ದು ಏನೋ ಗೊತ್ತಿಲ್ಲದೆ ಆ ರೀತಿ ಮಾಡಿದ್ದರೆ ನಾವು ಕ್ಷಮಿಸಬಹುದಿತ್ತು, ನಾವು ಕರೆದು ಹೇಳಬಹುದಿತ್ತು. ಆದರೆ ಎಲ್ಲಾ ಗೊತ್ತಿದ್ದೂ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಸದನದ ಸದಸ್ಯರ ಬಗ್ಗೆ ಹಗುರವಾಗಿ ಮಾತನಾಡಿರುವ ಉದ್ಧಟತನವೇನಿದೆ ಅದಕ್ಕೆ ಅವರನ್ನು ಇಲ್ಲಿ ಕರೆದು ಚೀಮಾರಿ ಹಾಕಬೇಕು. ಏಕೆಂದರೆ, ಇನ್ನು ಮುಂದೆ ಈ ರೀತಿ ಮಾಡಬಾರದು, ಇದು ಅಕ್ಷಮ್ಯ ಅಪರಾಧ, ಬಹಳ ವರ್ಷಗಳಿಂದ ಈ ಸದನಕ್ಕೆ ಮತ್ತು ಸಮಿತಿಗೆ ಗೌರವಿದೆ. ಆದರೆ ಅದರ ಬಗ್ಗೆ ಯಾರು ಏನು ಬೇಕಾದರೂ ಹಾಗು ಹಗುರವಾಗಿ ಮಾತನಾಡಬಹುದು

ಎನ್ನುವ ಪರಿಸ್ಥಿತಿಗೆ ನಾವು ತರಬಾರದು. ಆ ದೃಷ್ಟಿಯಿಂದ ಮಾನ್ಯ ವಾಟಾಳ್‌ನಾಗರಾಜ್ ಅವರು ಹೇಳಿದ್ದುದು ಸರಿಯಾಗಿದೆ. ಅವರನ್ನು ಕರೆದು ಚೀಮಾರಿ ಹಾಕಲು ತಮಗೆ ಅಧಿಕಾರವೂ ಇದೆ. ದಯಮಾಡಿ ಆ ಕೆಲಸವನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಮೋಳಾ ನೇಸರ್ಗಿಯವರು ಮೊದಲು ಇದರ ಬಗ್ಗೆ ಓದದೆ ಪ್ರಸ್ತಾಪ ಮಾಡಿದರು, ತಾವೂ ಅದನ್ನು ಹಕ್ಕುಚ್ಯುತಿ ಸಮಿತಿಗೆ ರೆಫರ್ ಮಾಡುವುದಾಗಿ ಹೇಳಿದ್ದೀರಿ. ಅವರು ಪ್ರಸ್ತಾಪ ಮಾಡಿದಾಗ ನಮಗೆ ವಿಷಯ ಗೊತ್ತಾಗಲಿಲ್ಲ. ಅವರು ಓದಿದಮೇಲೆ ವಿಷಯವನ್ನು ನಾವೆಲ್ಲರೂ ತಿಳಿದುಕೊಂಡಿದ್ದೇವೆ. ಹೊರಗಿನವರ ಬಗ್ಗೆ ನಮ್ಮ ಸದನದಲ್ಲಿ ಯಾರೂ ಮಾತನಾಡಬಾರದೆಂದು ನಮ್ಮ ನಿಯಮದಲ್ಲಿದೆ, ಮತ್ತು ಪದ್ಧತಿಯಾಗಿ ನಡೆದುಕೊಂಡು ಬಂದಿದೆ. ಉದಾಹರಣೆಗೆ ಜ್ಯುಡೀಷಯರಿ ಬಗ್ಗೆಯಾಗಲಿ, ಯಾವುದೇ ವಿಚಾರಣೆಯಾಗದೆ, ಕಮಿಷನ್ ಇದ್ದರೆ, ಟ್ರಿಬ್ಯೂನಲ್ ಇದ್ದರೆ ಅಥವಾ ಬೇರೆ ಸದನದ ಸದಸ್ಯರ ಬಗ್ಗೆಯೂ ಇಲ್ಲಿ ಮಾತನಾಡಬಾರದು ಎನ್ನತಕ್ಕ ನಿಯಮವನ್ನು ಪಾಲಿಸಿಕೊಂಡು ಬಂದಿದ್ದೇವೆ. ಆದರೆ ಈ ಸದನವನ್ನು ನಡೆಸಿಕೊಂಡು ಹೋಗತಕ್ಕಂಥ ಅಧ್ಯಕ್ಷರಿಗೆ ಈ ಸಮಿತಿಗಳು ಯಾವ ರೀತಿ ನಡೆದುಕೊಳ್ಳಬೇಕು ಎಂದು ಹೇಳುವುದಕ್ಕೆ ಹಕ್ಕಿದೆ. ಆದರೆ ಹೊರಗಿನವರಿಗೆ ಮಾತನಾಡತಕ್ಕ ಹಕ್ಕಿಲ್ಲ. ಹೊರಗೆ ನನ್ನ ನಡವಳಿಕೆಯ ಬಗ್ಗೆ ಅವರು ಏನಾದರು ಹೇಳಿಕೊಳ್ಳಬಹುದು, ಅದಕ್ಕೆ ನಾವು ಉತ್ತರವನ್ನೂ ಕೊಡಬಹುದು. ಆದರೆ ಸದನದಲ್ಲಿ ನಾವು ಅಧಿಕಾರವನ್ನು ಚಲಾಯಿಸಲು ಹಕ್ಕೇನಿದೆ ಅದನ್ನು ಚಲಾಯಿಸುವಾಗ ಅದರ ಬಗ್ಗೆ ಹೊರಗಿನವರು, ಬೇರೆಯವರು ಪ್ರಹಾರ ಮಾಡುವುದಾಗಿದ್ದರೆ, ಈ ಸದನವು ಅದನ್ನು ಸಹಿಸಿವುದಿಲ್ಲ. ಆದ್ದರಿಂದ ಈ ವಿಚಾರವನ್ನು ಹಕ್ಕುಚ್ಯುತಿ ಸಮಿತಿಗೆ ಕೊಡುವುದರ ಬದಲು ತಕ್ಷಣವೇ ಅದರ ಬಗ್ಗೆ ತೀರ್ಮಾನ ತೆಗೆದುಕೊಂಡು ತಾವು ಶಿಕ್ಷೆಗೆ ಗುರಿಮಾಡಬೇಕು. ಈ ರೀತಿ ಒಬ್ಬರಿಬ್ಬರಿಗೆ ಮಾಡಿದರೆ, ಈ ಸದನದ ಬಗ್ಗೆ ಹಗುರವಾಗಿ ಮಾತನಾಡತಕ್ಕದ್ದು ನಿಲ್ಲುತ್ತದೆ. ಇಲ್ಲದಿದ್ದರೆ ರಾಜಕಾರಣಿಯೆಂದರೇನು, ಲೆಜಿಸ್ಲೇಟರ್ಸ್ ಎಂದರೇನು ಎಂಬ ಬಗ್ಗೆ ಹಗುರವಾಗಿ ಕಾಣುವಂತಾಗುತ್ತದೆ. ಎಲ್ಲರನ್ನೂ ಒಂದೇ ರೀತಿಯಾಗಿ ತೂಕಮಾಡಿ ನೋಡತಕ್ಕದ್ದು ಕಷ್ಟವಾಗುತ್ತದೆ. ಅವರೂ ಸಹ ತಮ್ಮ ಇತಿಮಿತಿಯೇನು ಎಂಬುದನ್ನು ತಿಳಿದುಕೊಂಡು ಸರಿಯಾಗಿ ವರ್ತನೆ ಮಾಡಲು ಸಾಧ್ಯವಾಗುತ್ತದೆ. ತಾವು ಇದರ ಬಗ್ಗೆ ಹಕ್ಕುಚ್ಯುತಿ ಸಮಿತಿಗೆ ರೆಫರ್ ಮಾಡಿದರೆ ಅವರು ಒಂದು ಸಭೆ ಮಾಡುತ್ತಾರೆ, ಅದು ಮುಂದೂಡಬಹುದು, ಮತೆ ಸಭೆ ಸೇರುತ್ತಾರೆ, ವಿಳಂಬವಾಗುತ್ತದೆ. ವಿಷಯ ಡೈಲ್ಯೂಟ್ ಆಗುತ್ತದೆ. ಆದ್ದರಿಂದ ತಾವು ತಕ್ಷಣ ತೀರ್ಮಾನ ತೆಗೆದುಕೊಂಡು ಒಳ್ಳೆಯ ಸಂದೇಶ ಹೋಗಲಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್‌ನಾಗರಾಜ್‌ರವರು ಹೇಳಿರತಕ್ಕದ್ದಕ್ಕೆ ನನ್ನದೂ ಸಂಪೂರ್ಣವಾದ ಬೆಂಬಲವಿದೆ. ಎನ್.ಜಿ.ಓಗಳು ಮುಖ್ಯವಾಗಿ

ಇಂಥ ಸಂಸ್ಥೆಗಳು ಹಲವಾರು ಅವ್ಯವಹಾರಗಳನ್ನು ಮಾಡಿ, ಕೋಟ್ಯಾಂತರ ರೂಪಾಯಿಗಳನ್ನು ಲೂಟಿಮಾಡಿ ಅದನ್ನು ತನಿಖೆ ಮಾಡಲು ಸಮಿತಿಗೆ ಅಧಿಕಾರವಿಲ್ಲ, ನಮ್ಮ ಪ್ರಿಮಿಸಸ್‌ಗೆ ಸಮತಿ ಬರಲು ಅಧಿಕಾರವಿಲ್ಲವೆಂದು ಹೇಳಿದರೆ, ಈ ಸದನದ ಅಧಿಕಾರವೇನು ಎಂಬ ಬಗ್ಗೆ ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಸದನದ ಸಮಿತಿಯು ಅಲ್ಲಿಗೆ ಹೋಗಿ ತನಿಖೆಮಾಡಿ ವಿಚಾರಣೆ ಮಾಡತಕ್ಕ ಹಕ್ಕು ಇದೆ. ನಮ್ಮ ಹಕ್ಕನ್ನೇ ಪ್ರಶ್ನೆ ಮಾಡತಕ್ಕ ಪರಿಸ್ಥಿತಿ ಬಂದಾಗ ಮತ್ತು ಆ ಸಮಿತಿಯನ್ನು ನೇಮಕ ಮಾಡಿದಂಥ ಅಧ್ಯಕ್ಷರ ಸ್ಥಾನ ಮತ್ತು ಅಧಿಕಾರವನ್ನು ಪ್ರಶ್ನೆ ಮಾಡಿದರೆ, ಸದನದ ಪರಮಾಧಿಕಾರಕ್ಕೆ ಬಹಳ ಪೆಟ್ಟುಬಿದ್ದಂತಾಗುತ್ತದೆ. ಮತ್ತು ಯಾರು ಏನು ಬೇಕಾದರೂ ಮಾತನಾಡಿಕೊಂಡು ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತವೆ. ಅವರುಗಳು ಮಾಡಿರುವ ಅವ್ಯವಹಾರಗಳು ಎಲ್ಲರೂ ಖಂಡಿಸಬೇಕಾಗಿರತಕ್ಕ ಅವ್ಯವಹಾರಗಳು. ಸಿ.ಡಬ್ಲ್ಯೂ.ಸಿನವರು ಮಾಡಿರುವ ಅವ್ಯವಹಾರಗಳ ಬಗ್ಗೆ ನನ್ನ ಹತ್ತಿರ ಸಾಕಷ್ಟು ಮಾಹಿತಿ ಇದೆ. ಆದ್ದರಿಂದ ಮಾನ್ಯ ವಾಟಾಳ್‌ನಾಗರಾಜ್‌ರವರು, ವಿರೋಧ ಪಕ್ಷದ ನಾಯಕರು, ಮಾನ್ಯ ಖರ್ಗೆಯವರು ಹೇಳಿದಂತೆ ಈ ವಿಷಯವನ್ನು ಹಕ್ಕುಚ್ಯುತಿ ಸಮಿತಿಗೆ ಒಪ್ಪಿಸುವುದರ ಬದಲು, ಈವತ್ತೇ ಅದರ ಬಗ್ಗೆ ತೀರ್ಮಾನ ತೆಗೆದುಕೊಂಡು, ಸಂಬಂಧಪಟ್ಟವರಿಗೆ ಶಿಕ್ಷ ಕೊಡಲು ಸದನಕ್ಕೆ ಅಧಿಕಾರವಿದೆ. ಆ ಕೆಲಸವನ್ನು ಅಧ್ಯಕ್ಷರು ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ

ಅಧ್ಯಕ್ಷರು:- ಮಾನ್ಯ ಸದಸ್ಯರುಗಳ ಎಲ್ಲಾ ಅಭಿಪ್ರಾಯಗಳನ್ನು ನಾನು ಕೇಳಿದ್ದೇನೆ. ಶ್ರೀಮತಿ ಪ್ರಮೀಳಾ ನೇಸರ್ಗಿಯವರು ನನಗೇನು ಸೂಚನೆಯನ್ನು ಕೊಟ್ಟು ವಿವರಗಳನ್ನು ಕಳಿಸಿಕೊಟ್ಟಿದ್ದಾರೆ, ಅನಂತರ ನನ್ನ ಅನುಮತಿಯನ್ನು ಪಡೆದು ಪ್ರಸ್ತಾವಿಕ ಮನವಿಯನ್ನು ಸಲ್ಲಿಸುವ ಹಂತದಲ್ಲಿ ಎಲ್ಲಾ ತಮ್ಮಲ್ಲಿದ್ದಂಥ ವಿವರಗಳನ್ನೂ ಸದನಕ್ಕೆ ಒಪ್ಪಿಸಿದ್ದಾರೆ. ಮೇಲುನೋಟಕ್ಕೆ ಅವರು ಆಪಾದನೆ ಮಾಡಿದ್ದಾರೆ, ಹಕ್ಕುಚ್ಯುತಿಯನ್ನು ಮಾಡಿದ್ದಾರೆ ಎನ್ನತಕ್ಕದ್ದು ಮನವರಿಕೆಯಾದರೂ, ಅಧ್ಯಕ್ಷರು ಆದಿಯಾಗಿ ಎಲ್ಲರ ಬಗ್ಗೆಯೂ ಹೇಳಿರುವುದರಿಂದ ಅವರಿಗೆ ಸಮರ್ಥನೆ ಮಾಡಿಕೊಳ್ಳಲು ಸಂಪೂರ್ಣವಾದ ಮುಕ್ತವಾದ ಅವಕಾಶವನ್ನು ಕೊಡಬೇಕಾಗುತ್ತದೆ. ಒಂದುವೇಳೆ ಅವರು ಮಾಡಿರತಕ್ಕ ವಾದವನ್ನು ಸಮರ್ಥನೆ ಮಾಡಿಕೊಳ್ಳಲು ಏನಾದರೂ ಮಾಹಿತಿ ಇರುವುದಾರೆ, ನಾವು ಅವರಿಗೆ ಅದನ್ನು ಸಮರ್ಥನೆ ಮಾಡಲು ಅವಕಾಶ ಕೊಡಬೇಕಾದುದು ನಮ್ಮ ಕರ್ತವ್ಯ. ಏಕಾಏಕಿ ಶಿಕ್ಷೆಯನ್ನು ಕೊಡತಕ್ಕ ಅಧಿಕಾರ ಈ ಸದನಕ್ಕಿದ್ದರೂ ಅವರು ತಮ್ಮ ನಿಲುವನ್ನು ಸಮರ್ಥನೆ ಮಾಡಿಕೊಳ್ಳಲು ಏನಾದರೂ ಮಾಹಿತಿ ಇರುವುದಾದರೆ ಅವರು ಮಾಡಿಕೊಳ್ಳಲಿ. ತಾವೆಲ್ಲರೂ ದಯಮಾಡಿ ನನ್ನಜೊತೆ ಸಹಕರಿಸಬೇಕು.

ಶ್ರೀ ವಾಟಾಳ್‌ನಾಗರಾಜ್:- ಮಾನ್ಯ ಅಧ್ಯಕ್ಷರೆ, ತಾವು ಹಕ್ಕುಚ್ಯುತಿ ಸಮಿತಿಗೆ ಇದನ್ನು ಕಳಿಸಬೇಕಾದರೆ, ಮೇಲುನೋಟಕ್ಕೆ ಇದು ಹಕ್ಕುಚ್ಯುತಿಯಾಗಿದೆಯೆಂದು ಕಂಡುಬರುತ್ತಿದೆ. ಹಕ್ಕುಚ್ಯುತಿ ಸಮಿತಿಗೆ ಇದನ್ನು ಕಳಿಸಬಾರದು ಎನ್ನುವ ವಾದಕ್ಕಿಂತ ಹೆಚ್ಚಾಗಿ ಇಂಥ ವಿಚಾರಗಳನ್ನು ಮಾಡಿದಾಗ, ರಾಜ್ಯದ ಮತ್ತು ದೇಶದ ಜನರಿಗೆ ಈ ಸದನಕ್ಕೆ ಎಷ್ಟು

ಸಾರ್ವಭೌಮತ್ವವಿದೆಯೆಂಬ ಬಗ್ಗೆ ಅರ್ಥವಾಗಿಬಿಡಲಿ. ಈ ಸದನದ ಬಗ್ಗೆ ಸಮಿತಿಯ ಬಗ್ಗೆ ಅಧ್ಯಕ್ಷರ ಬಗ್ಗೆ ಮಾತನಾಡುವಾಗ ಅವಿವೇಕದ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ ಎನ್ನತಕ್ಕ ತೀರ್ಮಾನಕ್ಕೆ ಬರಬೇಕಾಗುತ್ತದೆ. ತಾವು ಅನೇಕ ಸಲ ಸದನದಲ್ಲಿಲ್ಲದಿರುವವರ ಬಗ್ಗೆ ಮಾತನಾಡಬಾರದೆಂದು ಹೇಳುತ್ತೀರಿ, ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ನಾವು ಎಂದೂ ಸದನದಲ್ಲಿಲ್ಲದವರ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಇದು ಬಹಳ ಗುರುತರವಾದಂಥ ವಿಚಾರ.

ಅಧ್ಯಕ್ಷರು:- ನಾವು ತಮ್ಮಗಳ ಭಾವನೆಯನ್ನು ಸಂಪೂರ್ಣವಾಗಿ ಗ್ರಹಿಸಿಕೊಂಡಿದ್ದೇನೆ, ಅವರು ಹೇಳಿರುವ ಬಗ್ಗೆ ಸಮರ್ಥನೆ ಮಾಡಿಕೊಳ್ಳಲು ಒಂದು ಅವಕಾಶವನ್ನು ಕೊಡಬೇಕೆಂದು ನನ್ನ ಮನಸ್ಸಿಗೆ ಬಂದಿದೆ. ಅವರಿಗೆ ಒಂದು ಅವಕಾಶವನ್ನು ಕೊಡೋಣ. ಪ್ರಿವಿಲೇಜ್ ಸಮಿತಿಗೆ ಇದನ್ನು ರೆಫರ್ ಮಾಡೋಣ, ಅವರು ಸಮಿತಿಯ ಮುಂದೆ ಬಂದು ಏನು ವಾದ ಮಾಡುತ್ತಾರೋ, ತಮ್ಮ ಮಾತನ್ನು ಯಾವ ರೀತಿ ಸಮರ್ಥನೆ ಮಾಡುತ್ತಾರೋ ಮಾಡಲಿ. ಅನಂತರ ಪ್ರಿವಲೇಜ್ ಸಮಿತಿ ತೆಗೆದುಕೊಳ್ಳತಕ್ಕ ತಿರ್ಮಾನಕ್ಕೆ ನಾವು ಬದ್ದರಾಗೋಣ.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ತಾವು ಈಗಾಗಲೇ ತಿಳಿಸಿದಂತೆ ಪ್ರಾಯಶಃ ಲಾ ಆಫ್ ನ್ಯಾಚುರಲ್ ಜಸ್ಟೀಸ್ ಎನ್ನುವಂತಹ ವಿಚಾರದಲ್ಲೇ ತಾವು ಪ್ರಸ್ತಾಪ ಮಾಡಿದ್ದೀರಿ. ಎಷ್ಟೇ ಗುರುತರವಾದಂತಹ ಅಪಾದನೆಗಳು ಮೇಲು ನೋಟಕ್ಕೆ ಕಂಡು ಬಂದರೂ ಕೂಡ, ಮತ್ತು ಭಾವನೆಗಳು ಸದನದಲ್ಲಿ ವ್ಯಕ್ತವಾಗಿದ್ದರೂ ಕೂಡ, ತಾವು ಬಹಳ ನಿಷ್ಪಕ್ಷಪಾತವಾಗಿ, ಒಂದು ಅವಕಾಶವನ್ನು ಕೊಡಲಿಲ್ಲ ಎನ್ನುವಂತಹ ಮಾತು ಬರಬಾರದು ಮತ್ತು ಅವರನ್ನು ಅವರು ಸಮರ್ಥಿಸಿಕೊಳ್ಳಲಿಕ್ಕೆ ಒಂದು ಅವಕಾಶ ಬೇಕು ಎನ್ನುವ ದೃಷ್ಟಿಯಿಂದ ಮಾತನಾಡಿದ್ದೀರಿ. ಅವರಿಗೆ ಒಂದು ಅವಕಾಶವನ್ನು ನೀಡಬೇಕೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:- ಈ ಸದನದ ಅಧ್ಯಕ್ಷರ ಸ್ಥಾನವನ್ನು ಮತ್ತು ಸದಸ್ಯರ ಹಕ್ಕುಗಳನ್ನು ಕಾಪಾಡುವುದರ ಬಗ್ಗೆ ಹಾಗೂ ಈ ಸದನದ ಪಾವಿತ್ರತೆಯನ್ನು ಕಾಪಾಡುವುದರ ಬಗ್ಗೆ ಸದನ ಹಿರಿಯ ಸದಸ್ಯರುಗಳು ವ್ಯಕ್ತಪಡಿಸಿರತಕ್ಕ ಭಾವನೆಗಳನ್ನು ನಾನು ಪೂರ್ಣವಾಗಿ ಒಪ್ಪಿಕೊಂಡಿರುತ್ತೇನೆ. ಅವುಗಳನ್ನು ನಿರಾಕರಿಸಲಿಕ್ಕೆ ನಾನು ತಯಾರಿಲ್ಲ. ಆದರೂ ಕೂಡ ನನ್ನ ಮೇಲೆ ಒಂದು ರೀತಿ ಆರೋಪ ಬಂದಿರುವುದರಿಂದ, ಪ್ರಿವಿಲೇಜ್ ಕಮಿಟಿಯಲ್ಲಿ ಎಲ್ಲಾ ಹಿರಿಯ ನಾಯಕರುಗಳು ಇದ್ದಾರೆ, ಅಲ್ಲೇ ಈ ವಿಚಾರ ಚರ್ಚೆಯಾಗಲಿ ಎಂದು ಹೇಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ತಾವು ಈ ವಿಷಯವನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿದ್ದೀರಿ. ಈ ವಿಷಯ ಪರಿಶೀಲಿಸಿ ಸಮಿತಿಯು ಸದನಕ್ಕೆ ವರದಿ ನೀಡಲು ತಾವು ಏನಾದರೂ ಸಮಯ ಮಿತಿ ಹಾಕಬೇಕು. ಒಂದು ತಿಂಗಳು ಅಥವಾ ಎರಡು ತಿಂಗಳು ಸಮಯಾವಕಾಶನ್ನು ವರದಿ ಸಲ್ಲಿಸಲು ಸಮಿತಿಗೆ

ನೀಡಿ. ಇಲ್ಲದಿದ್ದರೆ ನನ್ನ ಅನುಭವದಲ್ಲಿ ಇಂಥಾದ್ದು ಬೇಗ ಆಗುವುದಿಲ್ಲ.

ಅಧ್ಯಕ್ಷರು:- ನಾನು ಸಮಿತಿಗೆ ಎರಡು ತಿಂಗಳ ಕಾಲಾವಕಾಶ ಕೊಡುತ್ತಿದ್ದೇನೆ. ಹಕ್ಕುಚ್ಯುತಿ ಸಮಿತಿಗೆ ವಹಿಸಿರುವ ಈ ವಿಷಯದ ಬಗ್ಗೆ ಸದರಿ ಸಮಿತಿಯು ಪರಿಶೀಲಿಸಿ ಎರಡು ತಿಂಗಳೊಳಗಾಗಿ ಈ ಸದನಕ್ಕೆ ವರದಿ ನೀಡಬೇಕೆಂದು ಸೂಚಿಸುತ್ತೇನೆ. ಈ ದಿಸೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ನೀಡಿದ ಸಲಹೆಯನ್ನು ನಾನು ಒಪ್ಪಿದ್ದೇನೆ. ನಾನು ಈ ವಿಚಾರವನ್ನು ಮೊದಲೇ ಹೇಳಬೇಕಾಗಿತ್ತು. ಮಾನ್ಯ ರಾಮಕೃಷ್ಣರವರೇ, ತಾವು ಅರೇಕೆರೆ ವಿಷಯ ಪ್ರಸ್ತಾಪ ಮಾಡುವುದಾಗಿ ತಿಳಿಸಿದ್ದಿರಿ. ತಾವು ಅದನ್ನು ಈಗ ಪ್ರಸ್ತಾಪ ಮಾಡಬಹುದು. ಶೂನ್ಯ ವೇಳೆಗೆ ಅರ್ಧ ಗಂಟೆ ಮಾತ್ರ ಸಮಯವನ್ನು ನಿಗದಿ ಪಡಿಸಿಕೊಳ್ಳೋಣ. ಅದಕ್ಕಿಂತ ಹೆಚ್ಚಿನ ಸಮಯವನ್ನು ಶೂನ್ಯ ವೇಳೆಗಾಗಿ ತೆಗೆದುಕೊಳ್ಳುವುದು ಬೇಡ. ಮಾನ್ಯ ರಾಮಕೃಷ್ಣರವರು ವಿಷಯದ ಬಗ್ಗೆ ಸಂಕ್ಷಿಪ್ತವಾಗಿ ಪ್ರಸ್ತಾಪ ಮಾಡಿ. ಅದಕ್ಕೆ ಸರ್ಕಾರ ಏನು ಪ್ರತಿಕ್ರಿಯೆ ತೋರಿಸಬೇಕೋ ಅದನ್ನು ತೋರಿಸುತ್ತದೆ. ನನ್ನ ಬಳಿ ಬಂದು ಯಾರ್ಯಾರು ಅನುಮತಿ ಕೇಳಿದ್ದಾರೋ, ಅಂತಹವರಲ್ಲಿ ಇವತ್ತಿಗೆ ವಿಷಯ ಪ್ರಸ್ತಾಪಿಸಲು 5-6 ಹೆಸರುಗಳನ್ನು ಪಟ್ಟಿ ಮಾಡಿರುತ್ತೇನೆ. ದಯಮಾಡಿ ಎಲ್ಲರೂ ಸಹಕರಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಮಾನ್ಯ ಶಿವನಂಜಪ್ಪನವರೇ, ತಾವು ತಮ್ಮ ವಿಷಯವನ್ನು ನಾಳೆ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ. ತಾವು ಯಾವಾಗಲೂ ಆ ರೀತಿ ಬಂದು ಕೇಳಿದಂತಹವರು ಅಲ್ಲ. ತಾವು 3-4 ಸಲ ಬಂದು ನನಗೆ ಕೇಳಿದ್ದೀರಿ. ನನಗೆ ಜ್ಞಾಪಕವಿದೆ, ದಯಮಾಡಿ ಸಹಕರಿಸಿ, ತಮಗೆ ನಾಳೆ ಖಂಡಿತಾ ನಾನು ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಡುತ್ತೇನೆ. ಇವತ್ತು ಈಗಾಗಲೇ 5-6 ಹೆಸರುಗಳ ಪಟ್ಟಿ ಮಾಡಿಕೊಂಡಿರುತ್ತೇನೆ. ತಾವು ದಯಮಾಡಿ ಸಹಕರಿಸಿ.

ಅಧ್ಯಕ್ಷರ ಅಪ್ಪಣೆ ಮೇರೆಗೆ.

(ಅ) ಭಾರತೀಯ ಜನತಾಪಾರ್ಟಿಯ ಕಾರ್ಯಕರ್ತರುಗಳ ಮೇಲೆ ದಬ್ಬಾಳಿಕೆ, ದೌರ್ಜನ್ಯ, ಹಿಂಸೆ ಹಾಗೂ ಕೊಲೆ.

+ ಶ್ರೀ ವೈ.ರಾಮಕೃಷ್ಣ (ಅನೇಕಲ್):- ಮಾನ್ಯ ಅಧ್ಯಕ್ಷರೇ, ಅತ್ಯಂತ ದುಃಖ ತರತಕ್ಕಂಥ ಸಂಗತಿಯನ್ನು ಈ ಸಭೆಯ ಮುಂದೆ ಮಂಡಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ರಾಜ್ಯದ ಅನೇಕ ಕಡೆ ನಮ್ಮ ಭಾರತೀಯ ಜನತಾ ಪಾರ್ಟಿಯ ಕಾರ್ಯಕರ್ತರುಗಳ ಮೇಲೆ, ಮುಖಂಡರುಗಳ ಮೇಲೆ, ಅನೇಕ ಸ್ಥಳೀಯ ಸಂಸ್ಥೆಗಳ ಮೆಂಬರುಗಳ ಮೇಲೆ, ಶಾಸಕರುಗಳ ಮೇಲೆ ದಬ್ಬಾಳಿಕೆ, ದೌರ್ಜನ್ಯ, ಹಿಂಸೆ, ಖೂನಿ ಇವುಗಳು ನಡೆಯುತ್ತಿವೆ. ಇವುಗಳ ಬಗ್ಗೆ ಅನೇಕ ಸಾರಿ ನಾನು ಸರ್ಕಾರದ ಗಮನ ಸೆಳೆಯಲಿಕ್ಕೆ ಇಚ್ಛಪಟ್ಟಿದ್ದೆ ಮತ್ತು ಸಭೆಯಲ್ಲೂ ಕೂಡ ಪ್ರಸ್ತಾಪ ಮಾಡಿದಾಗ, ಎರಡು ಬಾರಿ ಚರ್ಚೆ ಆದಾಗ ಕಾಲಾವಕಾಶ ಇಲ್ಲದೇ ಅದನ್ನು ಮುಂದುವರೆಸಿದ್ದು ಆಯಿತು. ಇದು ಇಷ್ಟಕ್ಕೆ ನಿಲ್ಲುತ್ತದೆ ಎಂದು ನಾನು